ರಾಜ್ಯದಲ್ಲಿರುವ ಅಗ್ನಿಶಾಮಕ ಠಾಣೆಗಳಿಗೆ ಖರ್ಚು ಮಾಡಿದ ಹಣ ಕುರಿತು.

245 - ಶ್ರೀ ಅಕೋಕ್ ಕಾಟವೆ (ಹುಬ್ಬಳ್ಳಿ ನಗರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಗ್ನಿಶಾಮಕ ಠಾಣೆಗಳೆಷ್ಟು? 1995-96ನೇ ಸಾಲಿಗೆ ಖರ್ಚು ಮಾಡಿದ ಹಣವೆಷ್ಟು? ಧಾರವಾಡ ಜಿಲ್ಲೆಯದು ಪ್ರತ್ಯೇಕ ತಿಳಿಸುವುದು)

ಆ) ರಾಜ್ಯದಲ್ಲಿರುವ ಅಗ್ನಿಶಾಮಕ ಠಾಣೆಗಳಲ್ಲಿಯ ಖಾಲಿ ಹುದ್ದೆಗಳೆಷ್ಟು? ಅವುಗಳನ್ನು ಯಾವಾಗ ಭರ್ತಿ ಮಾಡಲಾಗುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :

ಅ) 66. 1995-96ನೇ ಸಾಲಿನಲ್ಲಿ ಜನವರಿ 1996ರ ಅಂತ್ಯದವರೆಗೆ ರೂ.8,97,20,000-00 ಖರ್ಚು ಮಾಡಲಾಗಿದೆ. ಇದರಲ್ಲಿ ರೂ. 30,58,000ಗಳು ಧಾರವಾಡ ಜಿಲ್ಲೆ ಅಗ್ನಿಶಾಮಕ ಠಾಣೆಗಳಿಗೆ ಖರ್ಚಾಗಿವೆ.

ಆ) 625 ಹುದ್ದೆಗಳು ಖಾಲಿ ಇವೆ. ಆದಷ್ಟು ಶೀಘ್ರವೇ ಭರ್ತಿ ಮಾಡಲಾಗುವುದು.

ತುಂಗಾ ಮೇಲ್ದಂಡೆ ಯೋಜನೆಯಿಂದ ನೀರಾವರಿಯಾಗುವ ಜಮೀನಿನ ವಿಸ್ತೀರ್ಣ.

364 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಂಗಾ ಆಣೆಕಟ್ಟಿನಿಂದ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಎಕರೆಗೆ ನೀರನ್ನು ಎಷ್ಟು ಬೆಳೆಗೆ ಪೂರೈಸಲಾಗುವುದು?

ಆ) ತುಂಗಾ ಮೇಲ್ದಂಡೆ ಯೋಜನೆಯು ಅನುಷ್ಠಾನವಾದ ಮೇಲೆ ಇನ್ನು ಹೆಚ್ಚಿನ ಎಷ್ಟು ಎಕರೆ ಜಮೀನಿಗೆ ಎಷ್ಟು ಬೆಳೆಗೆ ತುಂಗಾ ಆಣೆಕಟ್ಟು ಪೂರೈಸುವ ತಾಲ್ಲೂಕಿಗೆ ನಿರನ್ನು ಕೊಡಬಹುದು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಹಾಲಿ ಇರುವ ತುಂಗಾ ಆಣೆಕಟ್ಟಿನಿಂದ ಕೆಳಕಂಡ ಜಮೀನುಗಳಿಗೆ ಮುಂಗಾರು ಹಾಗೂ ಬೇಸಿಗೆ ಬೆಳೆಗಳಿಗೆ ನೀರನ್ನು ಪೂರೈಸಲಾಗುತ್ತಿದೆ.

ತಾಲ್ಲೂಕು	ಬೇಸಿಗೆ	ಮುಂಗಾರು ಬೆಳೆ
ಶಿವಮೊಗ್ಗ	2710 ಹೆ.	5432 ಹೆ.
ಹೊನ್ನಾಳಿ	-	3268 ಹೆ.
ಒಟ್ಟು	2710 ಹೆ.	8700 ಹೆ.

ಆ) ತುಂಗಾ ಮೇಲ್ದಂಡೆ ಯೋಜನೆ ಪೂರ್ಣಗೊಂಡ ಮೇಲೆ ಈ ತುಂಗಾ ಅಣೆಕಟ್ಟು ನೀರು ಪೂರೈಸುತ್ತಿರುವ ತಾಲ್ಲೂಕುಗಳಿಗೆ ಕೆಳಕಂಡಂತೆ ಹೆಚ್ಚು ಜಮೀನಿಗೆ ಮುಂಗಾರು ಬೆಳೆಗೆ ಮಾತ್ರ ನೀರನ್ನು ಪೂರೈಸಬಹುದು.

ತಾಲ್ಲೂಕು	ನೀರು ಪಡೆಯುವ ಹೆಚ್ಚಿನ ಜಮೀನು
ಶಿವಮೊಗ್ಗ	2125 ಹೆ.
ಹೊನ್ನಾಳಿ	5981 ಹೆ.
ಒಟ್ಟು	8106 ಹೆ.

ಕೃಷ್ಣ ಕಾವೇರಿ ಕೊಳ್ಳದಲ್ಲಿ ಕಾರ್ಯಗತವಾಗುತ್ತಿರುವ ಯೋಜನೆಗಳು

366 -ಶ್ರೀ ಯು.ಬಿ. ಬಣಕಾರ (ಹಿರೇಕರೂರು) : ಮಾನ್ಯ ಭಾರಿ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣಾ ಹಾಗೂ ಕಾವೇರಿ ಕೊಳ್ಳದಲ್ಲಿ ಪೂರ್ತಿಗೊಂಡು ಕಾರ್ಯಗತವಾಗುತ್ತಿರುವ ಹಾಗೂ ಇನ್ನೂ ತೆಗೆದು ಕೊಳ್ಳಬೇಕಾದ ಭಾರಿ, ಮಧ್ಯಮ ಹಾಗೂ ಚಿಕ್ಕನೀರಾವರಿ ಯೋಜನೆಗಳಾವುವು.

ಆ) ಈ ಯೋಜನೆಗಳಿಗೆ ಗೊತ್ತುಪಡಿಸುತ್ತ ನೀರಿನ ಪ್ರಯೋಗದ ಪ್ರಮಾಣ ಎಷ್ಟು ಟಿ.ಎಂ.ಸಿ. ಇಲ್ಲಿಯವರೆಗೆ ಉಪಯೋಗಿಸಿಕೊಂಡಿರುವ ನೀರಿನ ಪ್ರಮಾಣ ಎಷ್ಟು ಟಿ.ಎಂ.ಸಿ. ಹಾಗೂ ಉಪಯೋಗಿಸಿಕೊಳ್ಳಬೇಕಾದ ನೀರಿನ ಪ್ರಮಾಣ ಎಷ್ಟು ಟಿ.ಎಂ.ಸಿ.

ಇ) ಈ ವಿವಿಧ ಯೋಜನೆಗಳಿಂದ ನೀರಾವರಿಯಾಗಬಹುದಾದ ಕ್ಷೇತ್ರವೆಷ್ಟು, ಹೆಕ್ಟೇರ್ ಹಾಗೂ ಇಲ್ಲಿಯವರೆಗೆ ನೀರಾವರಿಯಾಗಿರುವ ಕ್ಷೇತ್ರವೆಷ್ಟು, ಹೆಕ್ಟೇರ್ ಇನ್ನೂ ನೀರಾವರಿ ಯಾಗಬೇಕಾಗಿರುವ ಕ್ಷೇತ್ರವೆಷ್ಟು ಹೆಕ್ಟೇರ್

ಈ) ಈ ವಿವಿಧ ಯೋಜನೆಗಳ ಅಂದಾಜು ಮೊತ್ತವೆಷ್ಟು ಇಲ್ಲಿಯವರೆಗೆ ವೆಚ್ಚವಾಗಿರುವ ಮೊತ್ತವೆಷ್ಟು ಹಾಗೂ ಇನ್ನೂ ವೆಚ್ಚ ಮಾಡಬೇಕಾಗಿರುವ ಮೊತ್ತವೆಷ್ಟು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು) :

ಅ) ಯೋಜನಾವಾರು ವಿವರಗಳನ್ನು ಲಗತ್ತಿಸಲಾಗಿರುವ ಪಟ್ಟಿಯಲ್ಲಿ ನೀಡಲಾಗಿದೆ.